

ನಾಂದಿನುಡಿ

# ಕಾರ್ನಾಡ: ಮರೆಯಾದ ಒಂದು ರಂಗಯುಗ

ಭಾರತೀಯ ರಂಗಭೂಮಿಯ ಮೇಲೆ ಅಪಾರ ಪ್ರಭಾವ ಬೀರಿದ ನಾಟಕಕಾರ ಗಿರೀಶ ಕಾರ್ನಾಡ ತಮ್ಮ ಬದುಕಿನ ಯಾನ ಮುಗಿಸಿದ್ದಾರೆ. ಅರ್ಧಶತಮಾನಕ್ಕೂ ಹೆಚ್ಚು ಕಾಲ ನಾಟಕ ರಚನೆಯ ಕಾಯಕವನ್ನು ವ್ರತದಂತೆ ನೆರವೇರಿಸಿದ್ದು ಮಾತ್ರವಲ್ಲ, ಪೂರ್ತಿಯಾಗಿ ಅದಕ್ಕೇ ಅರ್ಪಿಸಿಕೊಂಡವರು ಅವರು. ಕಾರ್ನಾಡರು ತಮ್ಮ ಪ್ರತಿಭೆ ಎಲ್ಲೂ ಪೋಲಾಗದಂತೆ ಎಚ್ಚರದಿಂದ ದಶದಿಕ್ಕಿನಲ್ಲಿ ದುಡಿಸಿಕೊಂಡು ಅತ್ಯುತ್ತಮ ನಾಟಕಗಳನ್ನು ಬರೆದ ಕಸುಬುದಾರ. ಅವರ ಇಡೀ ವ್ಯಕ್ತಿತ್ವವೇ ರಂಗಭೂಮಿಯಲ್ಲಿ ತೊಡಗಿಕೊಂಡಿತ್ತು. ಅವರ 'ಯಯಾತಿ', 'ತುಘಲಕ್', 'ತಲೆದಂಡ', 'ಹಯವದನ', 'ನಾಗಮಂಡಲ', 'ಅಗ್ನಿ ಮತ್ತು ಮಳೆ'ಯಂತಹ ನಾಟಕಗಳು ಕನ್ನಡ ಮಾತ್ರವಲ್ಲ, ಭಾರತದ ಅತ್ಯುತ್ತಮ ನಾಟಕಗಳಾಗಿವೆ. ಪುರಾಣ, ಇತಿಹಾಸ, ಜನಪದಗಳಿಂದ ವಸ್ತುಗಳನ್ನು ತೆಗೆದುಕೊಳ್ಳುತ್ತಿದ್ದ ಕಾರ್ನಾಡರು ಅವನ್ನು ಸಮಕಾಲೀನಗೊಳಿಸುತ್ತಿದ್ದ ರೀತಿ ಅವರನ್ನು ಭಾರತದ ಮಹತ್ವದ ನಾಟಕಕಾರರನ್ನಾಗಿಸಿತು. ದೃಶ್ಯಮಾಧ್ಯಮದ ಇನ್ನೊಂದು ಆಯಾಮವಾದ ಸಿನಿಮಾದಲ್ಲೂ ಅವರ ಪ್ರತಿಭೆಯ ಮತ್ತೊಂದು ಮಗ್ಗಲು ಕಾಣಿಸಿತು. ಅವರು ರೂಪಿಸಿದ 'ಕಾಡು', 'ತಬ್ಬಲಿಯು ನೀನಾದೆ ಮಗನೆ', 'ಒಂದಾನೊಂದು ಕಾಲದಲ್ಲಿ' ಸಿನಿಮಾಗಳು ಕಾರ್ನಾಡರ ಪ್ರತಿಭಾವಿಲಾಸವನ್ನು ತೋರುವ ಕೃತಿಗಳಾಗಿವೆ.

ಕನ್ನಡವನ್ನು ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿ ಪ್ರತಿನಿಧಿಸಬಹುದಾದ ಕೆಲವೇ ಸಾಂಸ್ಕೃತಿಕ ವ್ಯಕ್ತಿತ್ವಗಳಲ್ಲಿ ಕಾರ್ನಾಡರದೂ ಒಂದಾಗಿತ್ತು; ಬಹುಶಃ ಕೊನೆಯದೂ ಆಗಿರಬಹುದು. ಇದರ ಜೊತೆಗೇ ಅವರು ರಾಜಕೀಯ ಬದ್ಧತೆ ಇದ್ದ, ಅದನ್ನು ಕ್ರಿಯೆಯಲ್ಲಿ ತಂದ ಪ್ರಮುಖ ಲೇಖಕರೂ ಕೂಡ. ಲೇಖಕ ಯು.ಆರ್. ಅನಂತಮೂರ್ತಿಯವರಂತೆ ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ಕಾರ್ನಾಡರು ಬಲಪಂಥೀಯ ರಾಜಕಾರಣದಿಂದ ಸಮಾಜದ ಮೇಲೆ ಆಗುವ ಗಾಯಗಳ ವಿರುದ್ಧ ಪ್ರತಿಭಟಿಸಿದರು. ಈ ಬಗೆಯ ರಾಜಕೀಯ ಮತ್ತು ಸಾಂಸ್ಕೃತಿಕ ಹೊರಚಾಚು ಇದ್ದ ಈ ಲೇಖಕ ಸ್ಟಾರ್ ಕೂಡ ಆಗಿದ್ದು ಅವರ ನಡೆಗಳಿಗೆ ವಿಶಿಷ್ಟ ಖದರು ತಂದಿತ್ತು. ಅವರ ಮಾತುಗಳು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗುತ್ತಿದ್ದವು; ಚಿಂತನೆಗೆ ದಾರಿ ಮಾಡಿಕೊಡುತ್ತಿದ್ದವು.

ಕಾರ್ನಾಡರು ಬರೆದ ನಾಟಕಗಳು, ಮಾಡಿದ ಸಿನಿಮಾಗಳು ಅವರ ನಿರ್ಗಮನದ ಸಂದರ್ಭದಲ್ಲಿ ಚಿಂತನೆಗೆ ಅರ್ಹವಾಗಿವೆ. ರಾಜಕೀಯ ಚಿಂತನಶೀಲತೆ ಇದ್ದ ಕನ್ನಡದ ಕೆಲವೇ ಲೇಖಕರಲ್ಲಿ ಕಾರ್ನಾಡ ಪ್ರಮುಖರು. ಅಂತಹ ಪರಂಪರೆಯ ಕೊನೆಯ ಕೊಂಡಿಗಳಲ್ಲಿ ಒಂದು ಕಳಚಿದೆ. ಈ ಕಾಲದಲ್ಲಿ ಇಂತಹ ಒಂದು ದನಿ ಮರೆಯಾಯಿತು ಎಂದರೆ ಆಗುವ ಪರಿಣಾಮ ಗಾಢವೂ ದೀರ್ಘಕಾಲೀನವೂ ಆಗಿರುತ್ತದೆ. ಅವರ ಬದುಕು–ಬರಹ ಮುಂದಿನ ದಿನಗಳಲ್ಲಿ ಹೊಸ ತಲೆಮಾರಿನವರನ್ನು ವಿಸ್ಮಯಗೊಳಿಸುವುದರಲ್ಲಿ, ಅರ್ಥದ ಹೊಸಲೋಕಗಳಿಗೆ ತೆರೆಯುವುದರಲ್ಲಿ ಸಂದೇಹವಿಲ್ಲ. ಒಬ್ಬ ನಿಜವಾದ ಕ್ರಿಯಾಶೀಲನ ಸಾರ್ಥಕತೆ ಇರುವುದೇ ಇಂತಹುದರಲ್ಲಿ.

ಈ ಸಂಚಿಕೆಯಲ್ಲಿ ಅವರ ಒಡನಾಡಿಗಳು ಅವರ ಕುರಿತಂತೆ ಬರೆದಿದ್ದಾರೆ. ಅವರೆಲ್ಲರೂ ಕೊಟ್ಟ ಚಿತ್ರಗಳು ಕಾರ್ನಾಡರ ವ್ಯಕ್ತಿತ್ವ, ಬರವಣಿಗೆ, ಕೊಡುಗೆಯ ಸಮೀಪ ದರ್ಶನ ಮಾಡಿಸಬಹುದು ಎಂಬುದು ನಮ್ಮ ನಂಬಿಕೆ.

**ಸಂದೀಪ ನಾಯಕ**